ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರು, 40 ದಿನದೊಳಗೆ ತೀರ್ಪು ಬರಬೇಕು ಎನ್ನುವ ಮಾತನ್ನು ಹೇಳಿದ್ದಾರೆ. 40 ದಿನದಲ್ಲಿ ಆ ಸಮಿತಿ ಕೊಡುವ ವರದಿಯಲ್ಲಿ ಆ ಸಂಸ್ಥೆ ಅನ್ಯಾಯ ಮಾಡಿದೆ ಎನ್ನುವುದು ಖಾತರಿ ಆದರೆ, ಸರಿ ಇದ್ದರೆ ಪರವಾಗಿಲ್ಲ, ಅಲ್ಲಿಯತನಕ ಇದನ್ನು ನಿಲ್ಲಿಸಬೇಕು ಎನ್ನುವುದು ನನ್ನ ಪ್ರಾರ್ಥನೆ. ಏಕೆಂದರೆ ಅಲ್ಲಿ ಸ್ಟಾಕ್ ಇದೆ.....

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ನಾನು ಒಪ್ಪಿಕೊಂಡಿದ್ದೇನೆ, ಸಾರ್ವಜನಿಕ ಉದ್ದಿಮೆ ಸಮಿತಿ ಇದೆ. ಆ ಸಮಿತಿಯ ಮುಂದೆ ಎಲ್ಲಾ ದಾಖಲೆಗಳನ್ನು ಇಟ್ಟು, ಮಾನ್ಯ ಅಧ್ಯಕ್ಷರು 1979 ರಿಂದ ಎಂದು ಹೇಳಿ ಬಿಟ್ಟರು ಬಹುಶಃ ಇದು ಹುಟ್ಟಿತ್ತೋ ಇಲ್ಲವೋ.....

ಅಧ್ಯಕ್ಷರು : ಹಾಗಲ್ಲ, ಬೇಕಾಗಿದ್ದರೆ 1979 ರಿಂದ ನೋಡಿ ಅಂತ. They wanted it from 1989 but I gave them 10 more years.

SRI J.H. PATEL (Chief Minister) : That officer who has been posted there is doing a very good job. I was also Industries Minister and that factory unit belongs to my district. ನಿಮ್ಮ ಕಳಕಳಿ ಎನೆಂಬುದು ನನಗೆ ಗೊತ್ತಾಗುತ್ತದೆ. ಅದನ್ನು ವಿಚಾರ ಮಾಡೋಣ. ಯಾವನು ತಪ್ಪು ಮಾಡಿದ್ದಾನೆ ಅವನು ಉಪ್ಪು ತಿಂದವನು ನೀರು ಕುಡಿಯುತ್ತಾನೆ ನಮಗೇನು ?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನಿಮ್ಮ ಮತ್ತು ಮಾನ್ಯ ಮುಖ್ಯಮಂತ್ರಿಗಳ ಮಾತಿನ ಮೇಲೆ ನಮಗೆ ಸಂಪೂರ್ಣ ಭರವಸೆವಿರುವುದರಿಂದ, ನಾವು ಸಭಾತ್ಯಾಗ ಮಾಡುವುದಿಲ್ಲ ಹಾಗೂ ಧರಣಿಯನ್ನೂ ಮಾಡುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಧನ್ಯವಾದಗಳು.

ಅಧ್ಯಕ್ಷರು : ನಾನು ನಿಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಯಾವುದೇ ಒಂದು ಸಂದರ್ಭದಲ್ಲಿ ಈ ಸದನದಲ್ಲಿ ಒಂದು ಚೂರು ಅನುಮಾನ ಯಾವುದೇ ವ್ಯವಹಾರದಲ್ಲಿ ಬಂದರೂ ಕೂಡ ನಾನು ಈ ಸ್ಥಾನದಲ್ಲಿ ಕುಳಿತುಕೊಂಡು ಅನುಮಾನಕ್ಕೆ ಪರಿಹಾರವನ್ನು ಕಂಡುಕೊಳ್ಳದೆ ಹಾಗೆ ಬಿಟ್ಟು ಹೋಗುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ, ಅವರು ಕೂಡ ಅವಕಾಶ ಕೊಡುವುದಿಲ್ಲ.

ಹೊಸ ವರ್ಷದ ಶುಭಾಷಯಗಳು

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಅವಕಾಶವೇ ಇಲ್ಲ. ನಾವು ನಾಡಿದ್ದು ಈಶ್ವರನಾಮ ಸಂವತ್ಸರದಿಂದ ಬಹುಧಾನ್ಯ ಸಂವತ್ಸರಕ್ಕೆ ಕಾಲಿಡುತ್ತಿದ್ದೇವೆ. ಈ ಸದನದಲ್ಲಿ ಈ ವರ್ಷ ಏನೇನು ಆಯಿತು ಎಂದು ಕೆಲವು ಘಟನೆಗಳನ್ನು ನೆನಪು ಮಾಡಿಕೊಳ್ಳುತ್ತೇನೆ. ಈಶ್ವರ ನಾಮ ಸಂವತ್ಸರದಲ್ಲಿ ಕೆಲವು ಜಿಲ್ಲೆಗಳಲ್ಲಿ ಮಳೆ ಚೆನ್ನಾಗಿ ಆಯಿತು, ಮಳೆ ಜಾಸ್ತಿಯಾಗಿ ಕೆಲವು ಕಡೆ ಬೆಳೆ ಹಾನಿಯಾಯಿತು, ಕೆಲವು ಕಡೆ ಮಳೆ ಕಡಿಮೆಯಾಗಿ ಬೆಳೆ ಹಾನಿಯಾಯಿತು. ಮಳೆ ಜಾಸ್ತಿ ಬಂದಿದ್ದರಿಂದ

ಜಲಾಶಯಗಳು ಭರ್ತಿಯಾಯಿತ್ತಲ್ಲದೆ ವಿದ್ಯುತ್‌ನ್ನು ಕಷ್ಟಪಟ್ಟು ನಾವು ಮ್ಯಾನೇಜ್ ಮಾಡುವುದಕ್ಕೆ ಸಾಧ್ಯವಾಯಿತು. ಇನ್ನು ರಾಜಕೀಯವಾಗಿ ಹೇಳುವುದಾದರೆ ಎಲ್ಲಾ ಪಕ್ಷಗಳಿಗೂ ಸ್ವಲ್ಪ ಒಳ್ಳೆಯದು, ಸ್ವಲ್ಪ ಕೆಟ್ಟದ್ದು ಆಗಿದೆ. ಈಶ್ವರನಾಮ ಸಂವತ್ಸರವಾಗಿರುವುದರಿಂದ ಬಹುಶಃ ಈಶ್ವರಪ್ಪನವರಿಗೆ ಚೆನ್ನಾಗಿ ಆಗಿರಬಹುದು. ಈಗ ಬರುವ ಬಹುಧಾನ್ಯ ಸಂವತ್ಸರ ಎಲ್ಲರಿಗೂ ಒಳ್ಳೆಯದನ್ನು ಮಾಡಲಿ. ನಾನು ಕೇವಲ ನನಗೆ ಒಳ್ಳೆಯದಾಗಲಿ, ಖರ್ಗೆಯವರಿಗೆ ಕೆಟ್ಟದ್ದಾಗಲಿ ಎಂದು ನಾನು ಬಯಸುವುದಿಲ್ಲ. ತಮಗೂ ಹಾಗೂ ಸದನದ ಎಲ್ಲಾ ಸದಸ್ಯರಿಗೂ ಎಲ್ಲಾ ರೀತಿಯಲ್ಲಿ ಒಳ್ಳೆಯದಾಗಲಿ. ಜನ ಸುಖ, ಶಾಂತಿ, ನೆಮ್ಮದಿಯಿಂದ ಬಾಳಲಿ ಎಂದು ನನ್ನ ಆಶೆ. ಕೇವಲ ನಾವುಗಳು ಮಾತ್ರವಲ್ಲ. ಇಡೀ ದೇಶದ ಜನತೆ...

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಸುಭದ್ರವಾಗಿದೆ. ಕೊನೆಗಳಿಗೆಯಲ್ಲಿ ಸಂದೇಶ ಹೇಳುವಂತೆ ಹೇಳುತ್ತಿದ್ದಿರಲ್ಲಾ ಏಕೆ?

ಶ್ರೀ ಜೆ.ಹೆಚ್. ಪಟೇಲ್: ಸರ್ಕಾರ ಸುಭದ್ರವಾಗಿದೆ. ವರ್ಷ ಮಾತ್ರ ಹೋಗುತ್ತದೆ. ಈಶ್ವರ ನಾಮ ಸಂವತ್ಸರ ಕಳೆದು ಬಹುಧಾನ್ಯ ಸಂವತ್ಸರಕ್ಕೆ ಕಾಲಿಡುತ್ತಿದ್ದೇವೆ. ಎಲ್ಲರಿಗೂ ಒಳ್ಳೆಯದಾಗಲಿ ಎಂದು ಹೇಳುತ್ತಾ, ಮಾನ್ಯ ಅಧ್ಯಕ್ಷರ ಅನುಮತಿ ಕೋರಿ, ಯುಗಾದಿ ಸದನಕ್ಕಲ್ಲದೆ ಇಡೀ ನಾಡಿನ ಜನತೆಗೆ ಶುಭ ಕೋರುತ್ತೇನೆ.

ಅಧ್ಯಕ್ಷರು : ಕೆಲವು ಪ್ರಕಟಣೆಗಳು ಇವೆ.

ಜಂಟಿ ಸದನ ಸಮಿತಿ ಹಾಗೂ ಇತರ ಸ್ಥಾಯಿ ಸಮಿತಿಗಳನ್ನು ರಚಿಸಲು ಅಧ್ಯಕ್ಷರಿಗೆ ಅಧಿಕಾರ ನೀಡುವ ಬಗ್ಗೆ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತಿ ರಾಜ್ ಸಚಿವರು) : ಜಂಟಿ ಸದನ ಸಮಿತಿ ಹಾಗೂ ಇತರೆ ಸ್ಥಾಯಿ ಸಮಿತಿಗಳಿಗೆ ಸದಸ್ಯರನ್ನು ನೇಮಿಸಲು ಮಾನ್ಯ ಸಭಾಧ್ಯಕ್ಷರಿಗೆ ಸಂಪೂರ್ಣವಾದ ಅಧಿಕಾರವನ್ನು ಈ ಸದನ ಕೊಡುತ್ತದೆ.

ಪ್ರಕಟಣೆ - I

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

"ರಾಜ್ಯದಾದ್ಯಂತ ಸಕಾಲಕ್ಕೆ ಮಳೆ ಬಾರದ ಕಾರಣದಿಂದ ಕಳಪೆ ಗುಣಮಟ್ಟದ ಬೀಜಗಳು ಹಾಗೂ ಕ್ರಿಮಿಕೀಟನಾಶಕ ಔಷಧಿಗಳನ್ನು ಉಪಯೋಗಿಸಿದ್ದರಿಂದ ತೀವ್ರ ಆರ್ಥಿಕ ಹಾಗೂ ಮಾನಸಿಕ ಸಂಕಷ್ಟಕ್ಕೆ ಗುರಿಯಾಗಿರುವುದರಿಂದ ರೈತ ಸಮುದಾಯವು ಅಸಹಾಯಕ ಸ್ಥಿತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವರೆಂಬ ವರದಿಯನ್ನು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡು ಸದನದಲ್ಲಿ ಪ್ರಸ್ತಾಪಿತವಾದಾಗ ವಿಷಯಕ್ಕೆ ಸಂಬಂಧಿಸಿದಂತೆ ಸವಿವರವಾದ ವರದಿಯನ್ನು ಸಲ್ಲಿಸಲು ರಚಿಸಲಾದ ಜಂಟಿ ಸದನ